# ಬಿಡದು ಎಂದಿಗೂ ಹಳೆಯ ವಾಸನೆ

ಪದ್ಯಾನುವಾದ : ಮಡ್ವ ಶಾಮಭಟ್ಟ
ಕಲೆ : ಪುರುಷೋತ್ತಮ ಕಾರಂತ



ಶ್ರೀರಾಮಕೃಷ್ಣರು ಹೇಳಿದ ಕಥೆ



ಬುಟ್ಟಿ ಮೀನನು ಇಟ್ಟು ತಲೆಯಲಿ ಹೊತ್ತು ನಡೆದಳು ಬೆಸ್ತಳು
ಸತ್ತ ಮೀನಿಗು ಬಹಳ ಬೇಡಿಕೆ, ಹೊತ್ತು ಕವಿಯಿತು ಕತ್ತಲು ||೧||

ಅಲ್ಲಿ ಹತ್ತಿರದಲ್ಲಿ ಮಲ್ಲಿಗೆ ತೋಟ ಗಮುಗಮವಿದ್ದಿತು
ಒಡತಿ ಕರೆದಳು ಊಟವಿತ್ತಳು ನಿದ್ರಿಸಲು ಹಸೆಯಿತ್ತಳು ||೨||

ಸುತ್ತ ಹೂಗಳ ಚೆಲುವು ಚೆಲ್ಲಿದೆ ಗಂಧ ಮಾರುತ ಬೀಸಿದೆ
ಎತ್ತ ನೋಡಲು ಪುಷ್ಪವರಳಿದೆ ತುಟಿಯತೆರೆದಿದೆ ನಗುತಿದೆ ||೩||

ನಿದ್ದೆ ಬಾರದೆ ಎದ್ದು ಕುಳಿತಳು ಹೊರಳಿದಳು, ತಲೆ ಹಿಡಿದಳು
ಮೂಗು ಕಟ್ಟಿತು ತಲೆಯು ಕೆಟ್ಟಿತು ಎಂದು ಅತ್ತಳು ಬೆಸ್ತಳು ||೪||

ತೋಟದೊಡತಿಯು ಕಂಡಳಾಕೆಯ ಅತಿಥಿ ನರಳುವ ಪರಿಯನು
'ಕಾಟವೇನಿದೆ? ನಿದ್ದೆ ಬಾರದೆ? ಯಾಕೆ ನರಳುವೆ?' ಎಂದಳು ||೫||

'ನನಗೆ ತಿಳಿಯದು, ಆದರೊಂದಿದೆ ಪುಷ್ಪ ಗಂಧವ ಸಹಿಸೆನು
ಮೀನ ಬುಟ್ಟಿಯ ತಲೆಯ ಹತ್ತಿರವಿಟ್ಟು ನಿದ್ರಿಸೆ ಸುಖವದು' ||೬||

ಬುಟ್ಟಿ ತಂದಳು ನೀರು ತಳಿದಳು ಗಾಳಿ ಮೂಗಿಗೆ ಹಿಡಿದಳು
ನಿದ್ರೆಯಾಂತಳು ಗೊರಕೆ ಹೊಡೆದಳು ರಾತ್ರಿ ಕಳೆದಳು ಸುಖದೊಳು ||೭||

ಪ್ರಾಪಂಚಿಕ ವಾಸನೆ ಅಷ್ಟು ಸುಲಭವಾಗಿ ತೊಲಗದು